ಎಂದಾಗ ಅವರಿಗೆ ನೆರವಾಗಬೇಕು ಎನ್ನುವ ಉದ್ದೇಶದಿಂದ ನಾವು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ: ತಾವು land value ಅನ್ನು ಐದು ಪಟ್ಟು ಹೆಚ್ಚಿಗೆ ಮಾಡಬೇಕು.

ಕರ್ನಾಟಕ ಗೃಹ ಮಂಡಳಿಯಿಂದ ನಿವೇಶನ ಹಂಚಿಕೆ

33 (373) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರದಲ್ಲಿ ಕರ್ನಾಟಕ ಗೃಹ ಮಂಡಳಿಯವರು ನಿವೇಶನವನ್ನು ನೀಡುತ್ತೇವೆಂದು ಅರ್ಜಿದಾರರಿಂದ ನೋಂದಣಿ ಶುಲ್ಕ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅರ್ಜಿದಾರರಿಂದ ಪಡೆದಿರುವ ನೋಂದಣಿ ಶುಲ್ಕದ ಮೊತ್ತವೆಷ್ಟು ಮತ್ತು ನೋಂದಣಿ ಶುಲ್ಕ ಪಡೆದು ಎಷ್ಟು ವರ್ಷಗಳಾಗಿವೆ; (ವಿವರಗಳನ್ನು ನೀಡುವುದು)

ಇ) ನಿವೇಶನಕ್ಕಾಗಿ ನೋಂದಣಿ ಶುಲ್ಕ ಪಾವತಿಸಿರುವ ಅರ್ಜಿದಾರರ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)

ಈ) ನೋಂದಣಿ ಶುಲ್ಕ ಪಡೆದ ಅರ್ಜಿದಾರರಿಗೆ ಇದುವರೆವಿಗೂ ನಿವೇಶನಗಳನ್ನು ಹಂಚಿಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಅರ್ಜಿದಾರರಿಗೆ ಯಾವಾಗ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಮತ್ತು ನಗರದ ಯಾವ ಭಾಗದಲ್ಲಿ ಹಂಚಿಕೆ ಮಾಡಲಾಗುವುದು; (ವಿವರಗಳನ್ನು ನೀಡುವುದು) ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಬಂದಿದೆ.

ಆ) ನೋಂದಣಿ ಶುಲ್ಕವಾಗಿ ಒಟ್ಟು ರೂ. 15,81,875/–ಗಳನ್ನು 2006–07ರಲ್ಲಿ ಪಡೆಯಲಾಗಿದೆ. ನೋಂದಣಿ ಶುಲ್ಕ ಪಡೆದು ಐದು ವರ್ಷಗಳಾಗಿವೆ.

ಇ) ನಿವೇಶನಕ್ಕಾಗಿ ನೋಂದಣಿ ಶುಲ್ಕ ಪಾವತಿಸಿರುವ ಅರ್ಜಿದಾರರ ಒಟ್ಟು ಸಂಖ್ಯೆ 891.

ಈ) ಬಂದಿದೆ.

ಉ) ಚಿಕ್ಕಬಳ್ಳಾಪುರ ನಗರಕ್ಕೆ ಸಮೀಪದಲ್ಲಿರುವ ಅರಸನಹಳ್ಳಿ, ತುಮಕಲಹಳ್ಳಿ, ಕೊತ್ತನೂರು ಗ್ರಾಮಗಳಲ್ಲಿ ಜಮೀನುಗಳನ್ನು ಖರೀದಿಸಲು 179 ಎಕರೆ ಜಮೀನನ್ನು ಗುರುತಿಸಲಾಗಿದೆ. ಸದರಿ ಜಮೀನುಗಳಿಗೆ ಭೂ-ಬೆಲೆಯನ್ನು ನಿಗದಿಪಡಿಸಿ ಕೊಡುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಅದರಂತೆ, ಬೆಲೆ ನಿರ್ಧರಣೆ ಹಾಗೂ ಖರೀದಿ ಪ್ರಕ್ರಿಯೆಯ ನಂತರ ಬಡಾವಣೆಯನ್ನು ನಿರ್ಮಿಸಿ ನಿವೇಶನ ಹಂಚಿಕೆಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಪಿ. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಅವರು ಉತ್ತರದಲ್ಲಿ ಹೇಳಿರುವಂತೆ 2006-07ರಲ್ಲಿ ಸಾರ್ವಜನಿಕರಿಂದ ನೋಂದಣಿ ಶುಲ್ಕವಾಗಿ 15,81,875 ರೂಪಾಯಿಗಳನ್ನು ಪಡೆದು ಐದು ವರ್ಷಗಳು ಗತಿಸಿದರೂ ಕೂಡ ಯಾವುದೇ ಒಂದು ನಿವೇಶನವನ್ನು ಅಲ್ಲಿ ಗುರುತಿಸಿಲ್ಲ ಹಾಗೂ ಯಾರಿಗೂ ಕೂಡ ನಿವೇಶನ ಹಂಚಿಕೆಯಾಗಿಲ್ಲ. ಇದೇ ರೀತಿ ಹಿಂದೆ 2000ನೇ ಸಾಲಿನಲ್ಲಿ ಕೂಡ K.H.B.ಯವರು ಸಾರ್ವಜನಿಕರಿಂದ ಹಣವನ್ನು ಸಂಗ್ರಹಣೆ ಮಾಡಿದರು. ಅವರಿಗೂ ಕೂಡ ಇದುವರೆಗೆ ಸೈಟುಗಳು ವಿತರಣೆಯಾಗಿಲ್ಲ. ಇದೇ ರೀತಿ ಮುಂದುವರೆಯುತ್ತಾ ಹೋದರೆ ಇದೊಂದು ಬೋಗಸ್ ಕಂಪನಿ ರೀತಿ ಆಗಿಬಿಡುತ್ತದೆ. ಏಕೆಂದರೆ 2000ನೇ ಸಾಲಿನಲ್ಲಿ ನೋಂದಣಿ ಶುಲ್ಕವನ್ನು ಪಡೆದಿರುವವರಿಗೂ ನಿವೇಶನ ಹಂಚಿಕೆಯಾಗಿಲ್ಲ ಹಾಗೂ 2006-07ರಲ್ಲಿ ನೋಂದಣಿ ಶುಲ್ಕವನ್ನು ಪಡೆದಿರುವವರಿಗೂ ನಿವೇಶನ ಹಂಚಿಕೆಯಾಗಿಲ್ಲ. ನೀವು ಯಾವಾಗ ವಿತರಣೆ ಮಾಡುತ್ತೀರಿ ಎಂದು ಕೇಳಿದರೆ, ನಾವು ಇನ್ನೂ ಜಾಗ ಗುರುತಿಸುವುದರಲ್ಲಿದ್ದೇವೆ, ಅದೆಲ್ಲ ಪ್ರಕ್ರಿಯೆಯನ್ನು ಮುಗಿಸಿ ನಂತರ ನಾವು ನಿವೇಶನ ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ. ಕಳೆದ ಐದು ವರ್ಷಗಳಿಂದ ಏನೂ ಆಗದಿರುವುದರಿಂದ ಇದನ್ನು ಯಾವಾಗ ಮಾಡುತ್ತಾರೆ? ಇವರು ಎಷ್ಟು ದಿವಸಗಳಲ್ಲಿ ಹಂಚಿಕೆ ಮಾಡುತ್ತಾರೆನ್ನುವ ನಿಖರವಾದ ಉತ್ತರವನ್ನು ನಾನು ಬಯಸುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2006-07ರಲ್ಲಿ ನಾವು Housing Scheme ಅನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಂದು ಸರ್ವೆ ಕಾರ್ಯವನ್ನು ಏಕೆ ಮಾಡುತ್ತೇವೆಂದರೆ, ನಾವು ಮಾಡಿದ ಯೋಜನೆ ಯೋಜನೆಯಾಗಿರಬಾರದು, ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ಸಾಮಾನ್ಯ ಜನರಿಗೆ ಆಶ್ರಯ ಬೇಕಿದೆಯೇ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಅದರಲ್ಲಿ 891 ಅರ್ಜಿಗಳು ಬಂದಿವೆ. ಸುಮಾರು 15,08,187

ರೂಪಾಯಿ ಅದರಿಂದ ಕಲೆಕ್ಟ್ ಆಗಿದೆ. ನಾವು ಈಗಾಗಲೇ 179 ಎಕರೆ ಜಮೀನನ್ನು ಗುರುತಿಸಿದ್ದೇವೆ. ಆ ಜಮೀನು ಚಿಕ್ಕಬಳ್ಳಾಪುರಕ್ಕೆ ಸಮೀಪವಿರುವಂತಹ ಹಸರಳ್ಳಿ, ತೊಮಕಲಹಳ್ಳಿ ಹಾಗೂ ಕೊತ್ತನೂರು ಗ್ರಾಮಗಳಲ್ಲಿ ನಾವು 179 ಎಕರೆಯನ್ನು ಗುರುತಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ದರ ನಿಗದಿ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇವೆ. ಇದರ ಬಗ್ಗೆ 3–4 ದಿನಗಳಿಂದ ಚರ್ಚೆ ಮಾಡಿದ್ದೇವೆ. ಮಾನ್ಯ ಬಚ್ಚೇಗೌಡರು ಅವರ ಜಿಲ್ಲಾಧಿಕಾರಿಗಳ ಜೊತೆ ಕುಳಿತುಕೊಂಡು ಅಲ್ಲಿ ಏನು ದರ ಇದೆ ಎನ್ನುವುದನ್ನು ನೋಡಿ, ಆ ದರವನ್ನು ನಿಗದಿಪಡಿಸಿಕೊಟ್ಟರೆ, ಇನ್ನೆರಡು ಮೂರು ತಿಂಗಳಲ್ಲಿ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ. ಅದರಿಂದ ರೈತರಿಗೂ ಅನ್ಯಾಯವಾಗಬಾರದು, ಸಾಮಾನ್ಯ ಜನರಿಗೂ ತೊಂದರೆಯಾಗಬಾರದು, ನಾವು demand survey ಏಕೆ ಮಾಡುತ್ತೇವೆಂದರೆ ಅಲ್ಲಿ ಜನರಿಗೆ ಅವಶ್ಯಕತೆಯಿದ್ದರೆ ಮಾತ್ರ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ, ಅವಶ್ಯಕತೆ ಇಲ್ಲದಿದ್ದರೆ ಇದನ್ನು ಕೈಗೆತ್ತಿಕೊಳ್ಳುವುದು ಬೇಡವೆನ್ನುವ ತೀರ್ಮಾನದಿಂದ ಮಾಡಿದ್ದೇವೆ. ನಾನು ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ನಾಳೆ D.C. ಜೊತೆ ಕುಳಿತುಕೊಂಡು ಅದಕ್ಕೆ ಸಂಬಂಧಪಟ್ಟ ಕಡತವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ತಕ್ಷಣವೇ ಕಾರ್ಯೋನ್ಮುಖರಾಗುತ್ತೇವೆ.

ಶ್ರೀ ಕೆ.ಪಿ. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, 2000 ಸಾಲಿನಲ್ಲಿ ಹಣ ಪಡೆದಿರುವಂತಹ ವಿಚಾರಕ್ಕೆ ವಿವರಣೆ ಬಂದಿಲ್ಲ. ಆ ಹಣ ಏನಾಗಿದೆ ಎಂದು ಮಾನ್ಯ ಸಚಿವರು ಪರಾಮರ್ಶಿಸಬೇಕು. ಏಕೆಂದರೆ ಸಾರ್ವಜನಿಕರ ಹಣ ಈ ರೀತಿ ಪದೇ ಪದೇ ಪೋಲಾಗುವುದು ಸರಿಯಲ್ಲ. ಅಲ್ಲಿ ಜಿಲ್ಲಾ ಕೇಂದ್ರ ಆದನಂತರ ವಸತಿ ಸಮಸ್ಯೆ ಕೂಡ ದಿನೇ ದಿನೇ ಜಾಸ್ತಿ ಬೆಳೆಯುತ್ತಿದೆ. ನಗರ ಆಶ್ರಯದಲ್ಲಿ ಕೂಡ ನಿವೇಶನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವರು ಏನು ದರ ನಿಗದಿ ಮಾಡಿದ್ದಾರೆ ಅದನ್ನು ಪರಿಷ್ಕರಿಸಬೇಕೆನ್ನುವ ಮನವಿಯನ್ನು ಕೂಡ ಮಾನ್ಯ ವಸತಿ ಸಚಿವರಲ್ಲಿ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಜಯಚಂದ್ರರವರೇ, ನಾವು ಅಲ್ಲಿಯ demand ಅನ್ನು ಕೂಡ ಸರ್ವೆ ಮಾಡಿದ್ದೇವೆ. ಅಲ್ಲಿ ಇಷ್ಟು ಸೈಟು ಬೇಕೆನ್ನುವ ವಿಚಾರ ಇದೆ. ನಾವು ಏನೇ ಕೆಲಸ ತೆಗೆದುಕೊಂಡಾಗ, ಅಲ್ಲಿ ನಿವೇಶನ ಮಾಡಿದ ತಕ್ಷಣ, ನಮ್ಮ ಮೊದಲ ಆದ್ಯತೆ ಅಲ್ಲಿ ಯಾರು registration ಮಾಡಿದ್ದಾರೆ, ಅವರಿಗೆ ನೀಡಬೇಕೆನ್ನುವ ವಿಚಾರ ಮಾಡಿದ್ದೇವೆ. ಅದರಿಂದ ಈ ಯೋಜನೆ ಪೂರ್ಣವಾಗಬೇಕಾದರೆ ಜಿಲ್ಲಾಧಿಕಾರಿಗಳಿಂದ ದರ ನಿಗದಿಯಾಗಿ ಬಂದರೆ

ಒಳ್ಳೆಯದು. ನಾವು ಸಾರ್ವಜನಿಕರ ಹಣವನ್ನು ಇಟ್ಟುಕೊಂಡು ಅದರಿಂದ ಏನೋ ಮಾಡಬೇಕೆನ್ನುವ ಉದ್ದೇಶ ಏನೂ ಇಲ್ಲ. ನಾವು demand survey ಮಾಡದೇ ಹೋದರೆ ನಮಗೆ ಎಷ್ಟು demand ಇದೆ ಎಂದು ಗೊತ್ತಾಗುವುದಿಲ್ಲ. ಆದ್ದರಿಂದ demand survey ಮಾಡಿದ್ದೇವೆ. ನಾನು ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ ತಾವು ಕಳುಹಿಸಿದ ತಕ್ಷಣ ನಾವು ಕಾರ್ಯೋನ್ಮುಖರಾಗುತ್ತೇವೆ.

ಆಶ್ರಯ ಮನೆಗಳ ಕಾಮಗಾರಿ ಪೂರ್ಣವಾಗದಿರುವುದು

34 (116) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ಪಟ್ಟಣ ಶಿವಪುರದ ಬಳಿ ಆಶ್ರಯ ಮನೆಗಳ ನಿರ್ಮಾಣ ಕಾಮಗಾರಿಯು ಕಳೆದ 7–8 ವರ್ಷಗಳಲ್ಲಿ ಪ್ರಾರಂಭವಾಗಿ ಇದುವರೆವಿಗೂ ಪೂರ್ಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ನಿರ್ಮಾಣ ಕಾಮಗಾರಿಯು ಪೂರ್ಣವಾಗದಿರಲು ಕಾರಣಗಳೇನು;

ಇ) ಈ ಆಶ್ರಯ ಮನೆಗಳ ಕಾಮಗಾರಿಯು ಕಳಪೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕಳಪೆ ಕಾಮಗಾರಿಗಳಿಗೆ ಕಾರಣಕರ್ತರಾದ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಯಾರು (ವಿವರಗಳನ್ನು ನೀಡುವುದು);

ಉ) ಈ ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರಿ ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಊ) ಈ ಕಳಪೆ ಕಾಮಗಾರಿಯನ್ನು ನಿರ್ವಹಿಸಿದ ಸಂಸ್ಥೆಯನ್ನು ಸರ್ಕಾರ ಕಪ್ಪು ಪಟ್ಟಿಗೆ ಸೇರಿಸುವುದೇ ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಹೌದು.

ಆ) ನಗರ ಆಶ್ರಯ 2002–2003ನೇ ಶ್ರೇಣಿಯಡಿಯಲ್ಲಿ ಮದ್ದೂರು ಪಟ್ಟಣದ ಶಿವಪುರದ ಬಳಿ ಇರುವ ಬಡಾವಣೆಗೆ ಒಟ್ಟು 262 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ. ಒಟ್ಟು 262 ಮನೆಗಳಲ್ಲಿ 115 ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 73 ಮನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿ ಇರುತ್ತವೆ. ಮತ್ತು ಉಳಿದ 74 ಮನೆಗಳು ಪ್ರಾರಂಭವಾಗಬೇಕಾಗಿರುತ್ತದೆ. ಮನೆಗಳ ನಿರ್ಮಾಣ ಮಾಡುತ್ತಿರುವ ಸ್ಥಳವು ಜೌಗು ಪ್ರದೇಶದಿಂದ ಕೂಡಿದ್ದು,